ಸೃಜನಿ

SRUJANI: Indian Journal of Innovative Research and Development (SIJIRD)
Volume-4 Issue 2, May-June 2025, Pp. 160-165
Bi-Monthly, Peer-Reviewed, Open Access, Indexed Journal

I S S N: 2583-3510
SIRDF JOURNALS
editor@srujani.in
www.srujani.in

# ಡಾ.ಬಿ.ಆರ್.ಅಂಬೇಡ್ಕರ್ ಪರಿಕಲ್ಪನೆಯಲ್ಲಿ ದಲಿತರ ಅಭಿವೃದ್ಧಿಯ ಅವಲೋಕನ

**ಸಂತೋಷ್ ಕುಮಾರ್ ಹೆಚ್.ಜೆ[1] ಮತ್ತು ಪ್ರೊ.ಕೃಷ್ಣ ಹೊಂಬಾಳ್[2]**
[1]ಸಂಶೋಧನಾ ವಿದ್ಯಾರ್ಥಿ, [2]ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು
ರಾಜ್ಯಶಾಸ್ತ್ರ ಅಧ್ಯಯನ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮಾನಸ ಗಂಗೋತ್ರಿ, ಮೈಸೂರು.

***Abstract:***
*ಈ ಸಂಶೋಧನಾ ಲೇಖನವು ಡಾ.ಬಿ.ಆರ್. ಅಂಬೇಡ್ಕರ್ ಪರಿಕಲ್ಪನೆಯಲ್ಲಿ ದಲಿತರ ಅಭಿವೃದ್ಧಿಯ ರಚನೆ, ಬೆಳವಣಿಗೆ ಮತ್ತು ಪ್ರಗತಿಯನ್ನು ಅಭಿವ್ಯಕ್ತಗೊಳಿಸುತ್ತದೆ. ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಶತಶತಮಾನಗಳಿಂದಲೂ ಹಿಂದುಳಿದ ವರ್ಗವೇ ದಲಿತ ವರ್ಗ ಅಥವಾ ಆಸ್ಪೃಶ್ಯ ವರ್ಗ. ದೇಶದಲ್ಲಿ ಸ್ವಾತಂತ್ರ್ಯ ನಂತರ ಸಂವಿಧಾನ ಅಂಗೀಕರಿಸುವ ಪೂರ್ವದವರೆಗೆ ಯಾವುದೇ ರೀತಿಯ ರಾಜಕೀಯ ಆರ್ಥಿಕ ಸಾಮಾಜಿಕ ಶೈಕ್ಷಣಿಕ ಕ್ಷೇತ್ರದಲ್ಲಿ ಪೂರ್ಣವಾಗಿ ಭಾಗವಹಿಸುವ ಅವಕಾಶವಿರಲಿಲ್ಲ. ದೇಶದಲ್ಲಿ ದಲಿತರನ್ನು ನಾವು ಕಾಣುವುದಾದರೆ ಇವರನ್ನು ಇತರ ಹೆಸರುಗಳಿಂದ ಗುರುತಿಸುತ್ತಾರೆ. ಹೊರಗಿನವರು ಅಸ್ಪೃಶ್ಯರು, ಅತಿಶೂದ್ರರು, ಅವರ್ಣಿನೀಯರು. ಹೀಗೆ ಅನೇಕ ಹೆಸರುಗಳಿಂದ ಇವರನ್ನು ಗುರುತಿಸುತ್ತಾರೆ.*

**Keywords:** *ಡಾ.ಬಿ.ಆರ್. ಅಂಬೇಡ್ಕರ್ ಪರಿಕಲ್ಪನೆ, ದಲಿತರ ಅಭಿವೃದ್ಧಿ, ಅಭಿವೃದ್ಧಿಯ ಪರಿಚಯ*

## ಪೀಠಿಕೆ

ಸಮಾಜದಲ್ಲಿ ಮೇಲ್ವರ್ಗದವರ ಪಾಲಿಗೆ ದಲಿತರು ಅಪವಿತ್ರರಾಗಿದ್ದರು. ಅವರನ್ನು ಸ್ಪರ್ಶಿಸಬಾರದು, ಮಾತನಾಡಬಾರದು, ನೋಡಬಾರದು, ದಲಿತರ ಹೆಜ್ಜೆ ಗುರುತುಗಳು ಸಹ ಮೇಲ್ವರ್ಗದ ನೆಲದ ಮೇಲೆ ಮೂಡಬಾರದು ಅದಕ್ಕಾಗಿ ಅಷ್ಪೃಶ್ಯರು ಬೆನ್ನಿಗೆ ಪೊರಕೆಯನ್ನು ಕಟ್ಟಿಕೊಂಡು ನಡೆಯಬೇಕಿತ್ತು. ದಲಿತರು ಸಾರ್ವಜನಿಕ ಬಾವಿಯಲ್ಲಿ ನೀರನ್ನು ಮುಟ್ಟುವಂತಿರಲಿಲ್ಲ. ದೇವಾಲಯಗಳ ಒಳಗೆ ಪ್ರವೇಶವಿರಲಿಲ್ಲ. ಹಳ್ಳಿಗಳಲ್ಲಿ ಕ್ಷೌರಿಕರು ಮತ್ತು ಅಗಸರು ಈ ದಲಿತ ಸಮುದಾಯದ ಜನರಿಗೆ ತಮ್ಮ ಸೇವೆಯನ್ನು ನೀಡುತ್ತಿರಲಿಲ್ಲ. ಪ್ರಾಣಿಗಳನ್ನು ಪ್ರೀತಿಸುತ್ತಿದ್ದ ಸವರ್ಣೀಯರು ದಲಿತರನ್ನು ಪ್ರಾಣಿಗಳಿಗಿಂತ ಕೀಳಾಗಿ ಕಾಣುತ್ತಿದ್ದರು.

ಶತಮಾನಗಳಿಂದ ಜಾರಿಗೆ ಇದ್ದ ಈ ಅಸ್ಪೃಶ್ಯತೆ, ಜಾತೀಯತೆಯ ವಿರೋಧಿಸಿ ಅನೇಕ ಮಹಾನೀಯರು ವಿವಿಧ ಕಾಲಘಟ್ಟಗಳಲ್ಲಿ ಖಂಡಿಸಿದರು. ಗೌತಮ ಬುದ್ಧರು ಕ್ರಿ.ಪೂ. 500ರಲ್ಲಿಯೇ ಶಾಂತಿ, ಸಮಾನತೆ, ಅಹಿಂಸೆಯನ್ನು ಬೋಧಿಸಿ ಜನರಲ್ಲಿ ಶಾಂತಿ ಸ್ಥಾಪನೆಗೆ ಕರೆಕೊಟ್ಟರು. 11ನೇ ಶತಮಾನದಲ್ಲಿ ರಾಮಾನುಜರು ಅಸ್ಪೃಶ್ಯರನ್ನು ಶಿಷ್ಯರಾಗಿ ಸ್ವೀಕರಿಸುವ ಮೂಲಕ ವಿಮೋಚನಾ ಮಾರ್ಗದರ್ಶಿಯಾದರು. ಕರ್ನಾಟಕದಲ್ಲಿ ಬಸವಣ್ಣನವರು ಅಂತರ್ಜಾತಿಯ ವಿವಾಹ ನೆರವೇರಿಸಿ ಸಮಸಮಾಜ ಕನಸು ಕಂಡರು ಲಿಂಗಾಯಿತ ಧರ್ಮ ಕಟ್ಟುವ ಮೂಲಕ ಅಸ್ಪೃಶ್ಯ ಜಾತಿಯ ಜನರಿಗೆ ಲಿಂಗದೀಕ್ಷೆಯನ್ನು ನೀಡಿದರು.

***Please cite this article as:*** ಸಂತೋಷ್ ಕುಮಾರ್ ಹೆಚ್.ಜೆ ಮತ್ತು ಕೃಷ್ಣ ಹೊಂಬಾಳ್. (2025). ಡಾ.ಬಿ.ಆರ್.ಅಂಬೇಡ್ಕರ್ ಪರಿಕಲ್ಪನೆಯಲ್ಲಿ ದಲಿತರ ಅಭಿವೃದ್ಧಿಯ ಅವಲೋಕನ. *ಸೃಜನಿ: ಇಂಡಿಯನ್ ಜರ್ನಲ್ ಆಫ್ ಇನ್ನೋವೇಟಿವ್ ರೀಸರ್ಚ್ ಅಂಡ್ ಡೆವೆಲಪ್‌ಮೆಂಟ್*, 4(2), 160–165

ಸಾಮಾಜಿಕ ಸಮಸ್ಯೆಗಳನ್ನು ವಚನ ರೂಪದಲ್ಲಿ ರಚಿಸಿ, ಸಮಾನತೆಗೆ ಕರೆಕೊಟ್ಟರು. ನಂತರದಲ್ಲಿ ಸಂತರಾದ ಚಕ್ರಧಾರ ರಮಾನಂದ ಕಭೀರ, ಚೈತನ್ಯ, ಏಕನಾಥ, ರೋಹಿದಾಸ ಮುಂತಾದವರು ಭಕ್ತಿಪಂಥದ ಯುಗದಲ್ಲಿ ಮನುಷ್ಯರ ನಡುವೆ ಸಮಾನತೆ ಸ್ಥಾಪನೆಯಾಗುವುದಕ್ಕೆ ಪೂರಕವಾಗುವಂತೆ ಶ್ರಮ ವಹಸಿದರು.

**ಅಭಿವೃದ್ಧಿಯ ಅರ್ಥ**

"ಅಭಿವೃದ್ಧಿ" ಎಂಬ ಪದಕ್ಕೆ ವ್ಯಾಪಕವಾದ ಅರ್ಥವಿದೆ. ಸಾಮಾಜಿಕ, ರಾಜಕೀಯ ಹಾಗೂ ಆರ್ಥಿಕ ವ್ಯವಸ್ಥೆಯಲ್ಲಿ ಸಂಭವಿಸುವ ಅನೇಕ ವಿಧಗಳ ಮತ್ತು ಅನೇಕ ರೀತಿಯ ಪರಿಣಾಮಗಳಿಗೆ ಕಾರಣವಾಗಬಲ್ಲ ಬದಲಾವಣೆಗಳನ್ನು "ಅಭಿವೃದ್ಧಿ" ಎಂದು ಕರೆಯಬಹುದು. ಬೆಳವಣಿಗೆ ಬಹುಮುಖವುಳ್ಳದ್ದು. ಅದು ಹಲವಾರು ವಿಷಯಗಳನ್ನು ಒಳಗೊಂಡಿರುತ್ತದೆ. ಅದು ವಿಭಿನ್ನ ಕ್ಷೇತ್ರಗಳನ್ನು ಏಕಕಾಲದಲ್ಲಿ ಅಥವಾ ವಿವಿಧ ಕಾಲಗಳಲ್ಲಿ ಜರುಗುವ ಬದಲಾವಣೆಗಳನ್ನು ಗಣನೆಗೆ ತೆಗೆದುಕೊಳ್ಳುವುದರಿಂದ ಅದೊಂದು ಅಂತರ ವಿಷಯಿಕ ಅಧ್ಯಯನವಾಗಿರುತ್ತದೆ. **ಮಿಯರ್ ಮತ್ತು ಬಾಲ್ಡ್‌ವಿನ್** ರವರ ಅಭಿಪ್ರಾಯದಂತೆ, ಒಂದು ಪ್ರಮುಖ ಉದ್ಯಮ ಚಕ್ರವು ಸುಮಾರು ಆರರಿಂದ ಹದಿಮೂರು ವರ್ಷಗಳವರೆಗೆ ಸಂಭವಿಸುವುದರಿಂದ ಆರ್ಥಿಕ ಅಭಿವೃದ್ಧಿಯ ಅಧ್ಯಯನದಲ್ಲಿ ಸುಮಾರು ಇಪ್ಪತ್ತೈದು ವರ್ಷಗಳ ಅವಧಿಯ ಚಲನೆಯನ್ನು ಪರಿಗಣಿಸಿವುದು ಸೂಕ್ತವೆಂದು ಎಂದಿದ್ದಾರೆ. **ಬಿ.ಆರ್.ಅಂಬೇಡ್ಕರ್** ರವರು "ನಾನು ಒಂದು ಸಮುದಾಯದ ಪ್ರಗತಿಯನ್ನು ಮಹಿಳೆಯರು ಸಾಧಿಸಿರುವ ಪ್ರಗತಿಯ ದರದಿಂದ ಅಳತೆ ಮಾಡುತ್ತೇನೆ" ಎಂದಿದ್ದಾರೆ.

**ಬೆಳವಣಿಗೆ**

19 ಮತ್ತು 20ನೇ ಶತಮಾನದಿಂದಲೂ ಅಸ್ಪೃಶ್ಯತೆ, ಜಾತೀಯತೆ ಸಮಾನತೆಯ ವಿರುದ್ಧ ಗಾಢ ಪರಿಣಾಮ ಬೀರಿದವು. ರಾಜರಾಮ್ ಮೋಹನ್ ರಾಯ್ ಮತ್ತು ಸಂಗಡಿಗರು ಸಾಮಾಜಿಕ ಮತ್ತು ಧಾರ್ಮಿಕ ಸುಧಾರಣೆ ಜಾತಿ ಪದ್ಧತಿಯ ವಿರುದ್ಧ ತಿರುಗಿದರು. ಮಹಾರಾಷ್ಟ್ರದಲ್ಲಿ ಮಹಾತ್ಮ ಜ್ಯೋತಿ ಭಾಪುಲೆರವರು. ಅಸ್ಪೃಶ್ಯ ಜನಾಂಗದವರಿಗೆ ಮೊಟ್ಟ ಮೊದಲ ಶಾಲೆಯನ್ನು 1848ರಲ್ಲಿ ಪುಣೆಯಲ್ಲಿ ಪ್ರಾರಂಭಿಸಿದರು. ತಮಿಳುನಾಡಿನಲ್ಲಿ ಪೆರಿಯಾರ ರಾಮಸ್ವಾಮಿ ತೀವ್ರವಾಗಿ ಖಂಡಿಸಿದರು. ಮಂಗಳೂರಿನಲ್ಲಿ ಕುದ್ಮುಲ್ ರಂಗರಾಯರು ದಲಿತ ವರ್ಗದ ಮಕ್ಕಳಿಗೆ ಉಚಿತ ಶಿಕ್ಷಣವನ್ನು ನೀಡಿದರು. ಹೀಗೆ ಮಹಾನೀಯರು ದೇಶದ ವಿವಿಧ ಕಡೆಗಳಲ್ಲಿ ದಲಿತ ವರ್ಗಕ್ಕೆ ಶ್ರಮಿಸಿದರು.

ನಂತರದಲ್ಲಿ ಭಾರತದಲ್ಲಿ ಅಸ್ಪೃಶ್ಯರ ದಲಿತರ ಬದುಕಿನಲ್ಲಿ ಆಶಾಕಿರಣದಂತೆ ಬಂದು ಜಾತಿ ವ್ಯವಸ್ಥೆ ಗುಲಾಮಗಿರಿ ಪದ್ಧತಿಯಿಂದ ಸಮಾಜದಲ್ಲಿ ಇತರ ಮಾರ್ಗಗಳೊಂದಿಗೆ ಸಂಬಂಧಿಗಳಾಗಿ ಬದುಕುವ ಕನಸನ್ನು ನನಸಾಗಿಸಿದರು ಡಾ.ಬಿ.ಆರ್.ಅಂಬೇಡ್ಕರ್ ಸಾಮಾಜಿಕ, ಆರ್ಥಿಕ, ರಾಜಕೀಯ, ಶೈಕ್ಷಣಿಕ ಕ್ಷೇತ್ರಕ್ಕೆ ದಲಿತರು ಮಾತ್ರವಲ್ಲದೇ ಮಹಿಳೆಯರು ಕೂಡ ಭಾಗವಹಿಸುವಂತೆ ಮಾಡಿದವರು. ಡಾ.ಬಿ.ಆರ್.ಅಂಬೇಡ್ಕರ್ ಸ್ವತಃ ತಾವೇ ಜಾತಿ ತಾರತಮ್ಯಕ್ಕೆ ಒಳಗಾಗಿದ್ದು ಅನೇಕ ಕಡೆಗಳಲ್ಲಿ ಅವರನ್ನು ಅಸ್ಪೃಶ್ಯರೆಂದು ದೂರ ಇಟ್ಟಿದರು. ಈ ಎಲ್ಲಾ ಸಮಸ್ಯೆಯನ್ನು ಕಂಡಿದ್ದ ಇವರು ಇದೆಲ್ಲವನ್ನು ತೊಡೆದು ಹಾಕಿ ಸಮ ಸಮಾಜದ ಕನಸನ್ನು ಕಂಡರು. ಭಾರತದಲ್ಲಿ ಜನಸಂಖ್ಯೆಯಲ್ಲಿ ಶೇಡಕ 30ರಷ್ಟು ಇರುವ ಇವರನ್ನು ಶೇಕಡ 2ರಷ್ಟು ಜನಸಂಖ್ಯೆ ಹೊಂದಿರುವ ಜನರುಗಳು ಶೋಷಣೆ ದಬ್ಬಾಳಿಕೆ ಜೀತಗಾರಿಕೆಗೆ ಬಳಸಿಕೊಳ್ಳುತ್ತಿರುವುದು ಅವಮಾನದ ಸಂಗತಿ ಎಂದು ತಿಳಿದರು. ಆದ್ದರಿಂದ ಸಮಾಜದಲ್ಲಿ ಇತರ ವರ್ಗಗಳಿಗೆ ಸಿಗುತ್ತಿರುವ ಸೌಲಭ್ಯಗಳು ಹಕ್ಕುಗಳು ಸಹ ಸಾವಿರಾರು ವರ್ಷಗಳಿಂದ ಶೋಷಣೆಗೆ ಒಳಗಾಗಿದ್ದ ದಲಿತರಿಗೆ ಅಸ್ಪೃಶ್ಯರಿಗೆ ಮಹಿಳೆಯರಿಗೆ ಎಲ್ಲಾ ವರ್ಗಗಳೊಂದಿಗೆ ಸರಿ ಸಮಾನವಾದ ಅವಕಾಶ ದೊರಕಿಸಿ ಕೊಡಬೇಕು.

ಇದರಿಂದ ಮಾತ್ರ ಸಮಸಮಾಜ ಕನಸು ಸಾಧ್ಯ ಎಂದು ತಿಳಿದು ಈ ಎಲ್ಲಾ ಹಕ್ಕು ಸೌಲಭ್ಯವನ್ನು ಸಂವಿಧಾನದ ಮೂಲಕ ಕಾನೂನು ರಚಿಸಿ ಹಕ್ಕುಗಳನ್ನು ನೀಡಿದವರು ಡಾ.ಬಿ.ಆರ್.ಅಂಬೇಡ್ಕರ್‌ರವರು.

**ಭೂ ಒಡೆತನದ ಹಕ್ಕುಗಳು**

ದಲಿತ ವರ್ಗದ ಜನರು ಅಭಿವೃದ್ಧಿ ಹೊಂದಬೇಕಾದರೆ ಡಾ.ಬಿ.ಆರ್.ಅಂಬೇಡ್ಕರ್ ಕೆಲವು ಕ್ಷೇತ್ರಗಳಲ್ಲಿ ಇವರಿಗೆ ಪ್ರಾತಿನಿಧ್ಯತೆ ದೊರಕಬೇಕು ಎಂದರು. ಪ್ರಮುಖವಾಗಿ ಭೂ ಒಡೆತನ, ಭೂಮಿಯು ಒಂದು ಪ್ರಧಾನವಾದ ಸಂಪತ್ತಾಗಿದ್ದ ದಲಿತರು ಭೂ ಹೀನರಾಗಿರುವುದರಿಂದ ಅವರು ಸ್ವಾತಂತ್ರ್ಯವಾಗಿ ದುಡಿಯುವ ಸಂಪತ್ತನ್ನು ಗಳಿಸಲು ಸಾಧ್ಯವಾಗದೇ ಭೂ ಒಡೆಯರಿಗೆ ಗುಲಾಮರಾಗಿ ಜೀತದಾಳುಗಳಾಗಿ ಇರಬೇಕಾಯಿತು. ಇದನ್ನು ಮನಗಂಡ ಅಂಬೇಡ್ಕರ್‌ರು ಜಮೀನ್ದಾರರಿಂದ ಮುಕ್ತಿಗೊಳಿಸಲು ಮತ್ತು ಭೂ ಒಡೆತನದ ಹಕ್ಕನ್ನು ದೊರಕಿಸಿಕೊಡಲು 1936 ರಲ್ಲಿ ಪ್ರಥಮ ಬಾರಿಗೆ ಜಮೀನ್ದಾರಿ ಪದ್ಧತಿಯ ನಾಶಕ್ಕಾಗಿ ಸ್ವತಂತ್ರ್ಯ ಮಜ್ದೂರ ಪಕ್ಷವನ್ನು ಸ್ಥಾಪಿಸಿ ಅದರ ಮೂಲಕ ಒತ್ತಾಯಿಸಿದರು. ದರಖಾಸು ಜಮೀನು ಮತ್ತು ಅರಣ್ಯ ಭೂಮಿಯನ್ನು ದಲಿತರಿಗೆ ಹಂಚುವುದು, ಬೇಸಾಯದಾರರಿಗೆ ಕನಿಷ್ಠ ವೇತನ ನಿಗದಿ ಮಾಡುವುದು ಭೂಮಿಯಲ್ಲಿ ದುಡಿಯುವವನಿಗೆ ಕೆಲಸದ ಸಮಯ 8 ಗಂಟೆಗೆ ನಿಗದಿ ಮಾಡುವಂತೆ ಒತ್ತಾಯಿಸಿದರು. ಶೇಕಡ 95ರಷ್ಟು ದಲಿತರು ಹಳ್ಳಿಗಳಲ್ಲಿ ವಾಸವಿದ್ದು ಅವರು ಜಮೀನ್ದಾರ ಭೂಮಿಗಳಲ್ಲಿ ಕೃಷಿ ಕಾರ್ಮಿಕರಾಗಿ ಭೂ ಒಡೆತನದ ಹಕ್ಕನ್ನೇ ಅರಿಯದೇ ಶೋಷಣೆಯಲ್ಲಿ ಮುಳುಗಿದ ಇವರುಗಳ ಕೃಷಿ ಭದ್ರತೆಯನ್ನು ಒದಗಿಸಲು ಪ್ರಯತ್ನಿಸಿದರು.

**ಭಾರತದ ಶಿಕ್ಷಣ ವ್ಯವಸ್ಥೆಯಲ್ಲಿನ ಬದಲಾವಣೆ**

ಡಾ.ಬಿ.ಆರ್.ಅಂಬೇಡ್ಕರ್‌ರವರು ಶಿಕ್ಷಣವನ್ನು ಎಲ್ಲರಿಗೂ ದೊರಕುವುದರ ಬಗ್ಗೆ ಚಿಂತಿಸಿದರು. ಸಾವಿರಾರು ವರ್ಷಗಳಿಂದ ಶಿಕ್ಷಣವನ್ನು ಏಕಸ್ವಾಮ್ಯ ಮಾಡಿಕೊಂಡು ಶೂದ್ರ ಹಾಗೂ ದಲಿತರನ್ನು ಶಿಕ್ಷಣದಿಂದ ದೂರ ಇಟ್ಟಿದರು. ಶಿಕ್ಷಣ ಸಂಘಟನೆ ಹೋರಾಟ ಈ ಮೂರು ಅಂಶಗಳು ಜೀವನದಲ್ಲಿ ಬಹಳ ಮುಖ್ಯವಾದ ಅಂಶವೆಂದು ಪರಿಗಣಿಸಿದರು. ಶಿಕ್ಷಣದಲ್ಲಿ ಎಲ್ಲಾ ವರ್ಗಗಳ ಪ್ರಾತಿನಿಧ್ಯತೆ ಎಷ್ಟಿದೆ ಎಂದು ಸರ್ವೇ ನೋಡಿದಾಗ ಅದರಲ್ಲಿ ಕೊನೆಯ ಸ್ಥಾನದಲ್ಲಿ ದಲಿತ ವರ್ಗ ಇತ್ತು. ಈ ಕಾರಣಕ್ಕಾಗಿ ಶಿಕ್ಷಣ ಪಡೆಯಲೇಬೇಕು ಎಂದು ಸಾರಿದರು.

ಭಾರತದಲ್ಲಿ ಬ್ರಿಟಿಷ್ ಶಿಕ್ಷಣ ತಜ್ಞ ಮೆಕಾಲೆ ಜಾರಿಗೆ ತಂದ ಸಾರ್ವತ್ರಿಕ ಶಿಕ್ಷಣ ನೀತಿ ಸಾಂಧರ್ಭಿಕವಾಗಿ ಆಕಸ್ಮಿಕವಾಗಿದ್ದರು. ಈ ಶಿಕ್ಷಣ ನೀತಿ ಇಡೀ ದೇಶದ ಜನ ಜಾಗೃತಿಯ ಚರಿತ್ರೆಯಲ್ಲಿ ಮೆಕಾಲೆಯವರ ಶಿಕ್ಷಣ ನೀತಿ ಒಂದು ಪ್ರಮುಖವಾದ ಮೈಲಿಗಲ್ಲು. ಇದು ದಲಿತ ಜನಾಂಗಗಳಿಗೆ ಲಭ್ಯವಾದ ಶಿಕ್ಷಣ ಅವಕಾಶ ಮೂಲಗಳಲ್ಲಿ ಬಹಳ ಮುಖ್ಯವಾದುದು ನಂತರದಲ್ಲಿ 1873ರಲ್ಲಿ ಜ್ಯೋತಿ ಬಾ ಪುಲೆಯವರು ಸತ್ಯಶೋಧಕ ಎಂಬ ಸಂಸ್ಥೆ ಸ್ಥಾಪಿಸಿ ಹಿಂದೂ ವ್ಯವಸ್ಥೆಯಲ್ಲಿ ಸರ್ವರಿಗೂ ಸಮಾನತೆ, ಸಮಾನಶಿಕ್ಷಣ ವಿಶೇಷವಾಗಿ ಹೆಣ್ಣುಮಕ್ಕಳು ಹಾಗೂ ಅಸ್ಪೃಶ್ಯರಿಗೆ ಶಿಕ್ಷಣ ನೀಡುವ ಮೂಲಕ ಅಸ್ಪೃಶ್ಯರ ಶೈಕ್ಷಣಿಕ ಬದುಕಿಗೆ ಬೆಳಕಾದರು. 1913ರಲ್ಲಿ ಪದವಿ ಗಳಿಸಿದ ಅಂಬೇಡ್ಕರ್ ರವರು ಮೊದಲಿಗರು ನಂತರದಲ್ಲಿ ಬರೋಡದ ಶಾಹು ಮಹಾರಾಜರ ಸಹಾಯದಿಂದ ಶಿಷ್ಯವೇತನ ಪಡೆದುಕೊಂಡು ಉನ್ನತ ವ್ಯಾಸಂಗ ಮಾಡಲು ವಿದೇಶಕ್ಕೆ ತೆರಳಿದರು.

ಶಿಕ್ಷಣ ಪೂರೈಸಿ ಮರಳಿದ ಅಂಬೇಡ್ಕರ್ ದಲಿತ ವರ್ಗಗಳ ಅಭಿವೃದ್ಧಿಗೆ ಶಿಕ್ಷಣ ಒಂದು ಪ್ರಬಲ ಅಸ್ತ್ರ ಎಂದು ತಿಳಿದು ಜುಲೈ 20, 1924ರಂದು ಬಹಿಷ್ಕೃತ ಹಿತಕಾರಿಣಿ ಸಭಾ ಸ್ಥಾಪಿಸಿದರು. ಇದರ ಮುಖ್ಯ ಉದ್ದೇಶ ದಲಿತ ವರ್ಗಗಳ ಸುಧಾರಿಸಿ ಹಾಗೂ ಶಿಕ್ಷಣಕ್ಕೆ ಆಧ್ಯತೆ ನೀಡುವುದಾಗಿತ್ತು. ಇದರಿಂದ ಪ್ರೌಢಶಿಕ್ಷಣ ಮತ್ತು ಕಾಲೇಜು ಶಿಕ್ಷಣವನ್ನು

ಪ್ರಥಮವಾಗಿ ಅಂಬೇಡ್ಕರ್‌ರವರು ನಗರ ಸಭೆ ಜಿಲ್ಲಾ ಬೋರ್ಡ್‌ಗಳ ಸಹಾಯದಿಂದ ಪುಣೆ, ನಾಸಿಕ್, ಸೊಲ್ಲಾಪುರ, ಥಾಣೆ, ಧಾರವಾಡ, ಬೆಳಗಾವಿಗಳಲ್ಲಿ ಉಚಿತ ವಿದ್ಯಾರ್ಥಿ ನಿಲಯಗಳನ್ನು ಪ್ರಾರಂಭಿಸಿದರು. ಇದರಿಂದ ಅಸ್ಪೃಶ್ಯ ವಿದ್ಯಾರ್ಥಿಗಳು ಪ್ರೌಢ ಶಿಕ್ಷಣ ಹಾಗೂ ಕಾಲೇಜು ಶಿಕ್ಷಣ ಪಡೆಯುವ ಮಹತ್ವದ ಪಾತ್ರವನ್ನು ವಹಿಸಿದರು. ಇತರೆ ಸಮುದಾಯದವರಂತೆ ಅಸ್ಪೃಶ್ಯರು ಉನ್ನತ ಶಿಕ್ಷಣ ಪಡೆದರೆ ಮಾತ್ರ ಅಸ್ಪೃಶ್ಯ ಜನಾಂಗದ ವಿದ್ಯಾರ್ಥಿಗಳು ಉನ್ನತ ಹುದ್ದೆ ಸೇರಿಸಿಕೊಂಡು ಸಮಾಜದ ಬದಲಾಣೆಗೆ ನಾಂದಿ ಆಗಬಹುದೆಂದು ದೃಢನಿಶ್ಚಯ ತಿಳಿಸಿದರು. 1945ರಲ್ಲಿ ಪೀಪಲ್ಸ್ ಎಜುಕೇಷನ್ ಸೊಸೈಟಿಯನ್ನು ಸ್ಥಾಪಿಸಿದರು. ಅದರ ಮುಖ್ಯ ಉದ್ದೇಶ ಶಿಕ್ಷಣದ ಪ್ರಸಾರವೇ ಆಗಿತ್ತು. ಈ ಸಂಸ್ಥೆಯ ಅಡಿಯಲ್ಲಿ 1946ರಲ್ಲಿ ಸರ್ಕಾರದ ಸಹಾಯ ಪಡೆದುಕೊಂಡು ಮುಂಬೈನಲ್ಲಿ ಸಿದ್ದಾರ್ಥ ಕಲಾ ಮತ್ತು ವಿಜ್ಞಾನ ಮಹಾವಿದ್ಯಾಲಯವನ್ನು ಸ್ಥಾಪಿಸಿದರು. ಈ ಕಾಲೇಜು ಪ್ರಾರಂಭವಾದ ವರ್ಷದಲ್ಲೇ 1363 ವಿದ್ಯಾರ್ಥಿಗಳು ಕಾಲೇಜಿಗೆ ಪ್ರವೇಶ ಪಡೆದರು. ಇವರಲ್ಲಿ 60ಕ್ಕೂ ಹೆಚ್ಚು ದಲಿತ ವರ್ಗದ ವಿದ್ಯಾರ್ಥಿಗಳು ಇದ್ದರು. ನಂತರ ಅತಿ ಹಿಂದುಳಿದ ಪ್ರದೇಶವಾಗಿದ್ದ ಮರಾಠ ವಾಡದಲ್ಲಿ ಮಿಲಿಂದ ವಿಶ್ವವಿದ್ಯಾಲಯ ಸ್ಥಾಪಿಸಿದರು. ನಂತರ ಸಿದ್ದಾರ್ಥ ವಾಣಿಜ್ಯ ಮತ್ತು ಅರ್ಥಶಾಸ್ತ್ರ ಮತ್ತು ಕಾನೂನು ಮಹಾವಿದ್ಯಾನಿಲಯವನ್ನು ಸ್ಥಾಪಿಸಿದರು. ಹೀಗೆ ಶಿಕ್ಷಣದ ಮಹತ್ವವನ್ನು ಚೆನ್ನಾಗಿ ಅರಿತುಕೊಂಡ ಅಂಬೇಡ್ಕರ್ ಕೆಳವರ್ಗದವರನ್ನು ಮೇಲೆತ್ತಲು ಅನ್ನ, ವಸತಿ, ಬಟ್ಟೆ ನೀಡಬೇಕಾದ ಅವಶ್ಯಕತೆಯಲ್ಲಿ ಉನ್ನತ ಶಿಕ್ಷಣ ನೀಡದ ಹೊರತು, ಆ ಕೀಳರಿಮೆ ಹೋಗದು ಎಂದು ಮಿಲಿಂದ ಮಹಾವಿದ್ಯಾಲಯ ಅಡಿಗಲ್ಲು ಸಮಾರಂಭದಲ್ಲಿ ಹೇಳಿದರು. ಆಲ್ ಇಂಡಿಯಾ ಶೆಡೂಲ್ಡ್ ಕಾಸ್ಟ್ ಫೆಡರೇಷನ್ ಸ್ಥಾಪಿಸಿ ಸರ್ಕಾರ ದಲಿತ ಮಕ್ಕಳಿಗಾಗಿ ಪ್ರತಿವರ್ಷ ಮುಂಗಡ ಪತ್ರದಲ್ಲಿ ಪ್ರತ್ಯೇಕ ಹಣವನ್ನು ಪ್ರೌಢ ಮತ್ತು ಉನ್ನತ ಶಿಕ್ಷಣಕ್ಕಾಗಿ ಕಾಯ್ದಿರಿಸಬೇಕೆಂದು ಒತ್ತಾಯಿಸಿದರು. ನಂತರದಲ್ಲಿ ಭಾರತ ಸಂವಿಧಾನದ ಮೂಲಭೂತ ಹಕ್ಕುಗಳಲ್ಲಿ ಸಾಂಸ್ಕೃತಿಕ ಮತ್ತು ಶೈಕ್ಷಣಿಕ 29 ಮತ್ತು 30ನೇ ನೀಡುವುದರ ಮೂಲಕ ಕಾನೂನಾತ್ಮಕವಾಗಿ ದೊರೆಯುವಂತೆ ಮಾಡಿದರು. ಉಚಿತ ಮತ್ತು ಕಡ್ಡಾಯ ಶಿಕ್ಷಣ ದೊರೆಯುವಂತಾಯಿತು. ಅಸ್ಪೃಶ್ಯ ವರ್ಗಗಳಿಗೆ ಶಾಲಾ ಕಾಲೇಜು ಉನ್ನತ ಶಿಕ್ಷಣದಲ್ಲಿ ಮೀಸಲಾತಿಯನ್ನು ನೀಡುವುದರೊಂದಿಗೆ ಶಿಷ್ಯವೇತನವನ್ನು ಪಡೆಯುವಂತೆ ಮಾಡಿದರು. ಇದರಿಂದಾಗಿ ದಲಿತ ವರ್ಗದ ಜನತೆ ಇಂದು ಬಹುತೇಕ ಕ್ಷೇತ್ರದಲ್ಲಿ ಉನ್ನತ ವ್ಯಾಸಂಗ ಪಡೆದು ಉನ್ನತ ಹುದ್ದೆ ಪಡೆಯಲು ಡಾ.ಬಿ.ಆರ್.ಅಂಬೇಡ್ಕರ್‌ರವರ ಶೈಕ್ಷಣಿಕ ನೀತಿ ಮುಖ್ಯ ಕೊಡುಗೆಯಾಗಿದೆ.

**ಭಾರತದ ಸಾಮಾಜಿಕ ಸಮಸ್ಯೆಗಳ ಅವಲೋಕನ**

ದಲಿತರ ಅಭಿವೃದ್ಧಿಗೆ ಸಂಬಂಧಿಸಿದಂತೆ ಡಾ.ಬಿ.ಆರ್.ಅಂಬೇಡ್ಕರ್‌ರವರು ಭಾರತದ ಸಾಮಾಜಿಕ ಸಮಸ್ಯೆಗಳ ಬಗ್ಗೆ ವಿವರಿಸಿದ್ದಾರೆ. ಅದರಲ್ಲೂ ಶೇಕಡ 30ರಷ್ಟು ಜನಸಂಖ್ಯಾ ಇರುವ ದಲಿತರು ಸಾಮಾಜಿಕವಾಗಿ ಅಸ್ಪೃಶ್ಯತೆ, ಜಾತೀಯತೆ ಇಂದ ಸಮಾಜದಲ್ಲಿ ಇತರರಂತೆ ಜೀವನ ನಡೆಸಲು ಸಾಧ್ಯವಾಗದನ್ನು ತೀವ್ರವಾಗಿ ಖಂಡಿಸಿದ್ದಾರೆ. ಸಾರ್ವಜನಿಕ ಸ್ಥಳಗಳಾದ ಹೋಟೆಲ್, ಬಸ್ ನಿಲ್ದಾಣ, ಕ್ಷೌರಿಕ ಅಂಗಡಿ, ಸರ್ಕಾರಿ ಕಛೇರಿ ದೇವಾಲಯ ಹಾಗೂ ಅನೇಕ ಕಡೆಗಳಲ್ಲಿ ಜಾತೀಯತೆಯಿಂದ ನಡೆಸಿಕೊಳ್ಳುತ್ತಿರುವುದನ್ನು ಕಂಡು ಅನೇಕ ಹೋರಾಟಗಳನ್ನು ನಡೆಸಿದರು. ಅವುಗಳನ್ನು ಕಟುವಾಗಿ ಟೀಕಿಸಿದರು.

ಅಂಬೇಡ್ಕರ್‌ರವರು ನಾಸ್ತಿಕರಾದರು ಹಿಂದೂ ಸಮಾಜದಲ್ಲಿ ಸಾಮಾಜಿಕ ಸಮಾನತೆಗೋಸ್ಕರ ಅಸ್ಪೃಶ್ಯರಲ್ಲಿ ಯಾರು ದೇವರನ್ನು ಪೂಜಿಸುವ ಮನೋಭಾವ ಹೊಂದಿದ್ದಾರೆ. ಅವರಿಗೆಲ್ಲರಿಗೂ ಮುಕ್ತವಾಗಿ ಪ್ರವೇಶ ನೀಡಬೇಕೆಂದರು, ಅಮರಾವತಿಯ ಅಂಬಾದೇವಿ ದೇವಸ್ಥಾನಕ್ಕೆ ಪ್ರವೇಶ

ಹೋರಾಟ ಪ್ರಾರಂಭಿಸಿದರು. ದೇವಾಲಯ ಮುಖಂಡರಿಗೆ ಸೂಚನೆ ತಿಳಿಸಿದರು. ಇದಕ್ಕೆ ಆಡಳಿತ ಮಂಡಳಿ ಆ ಪ್ರವೇಶವನ್ನು ನಿರಾಕರಿಸಿದರು. ಅಂಬೇಡ್ಕರ್ ಆರಂಭಿಸಿದ ಚಳವಳಿಗಳಲ್ಲಿ ನಾಸಿಕದ ಕಾಳಾರಾಮ ದೇವಾಲಯ ಪ್ರವೇಶ ಚಳುವಳಿ ಬಹುಮುಖ್ಯವಾದವು. ಶ್ರೀರಾಮನ ಪೂಜೆ ರಥಕ್ಕಾಗಿ 3 ತಿಂಗಳುಗಳ ಕಾಲ ಸಿದ್ಧತೆಯನ್ನು ಅಸ್ಪೃಶ್ಯರು ಮಾಡಿಕೊಂಡರು. ಅಂಬೇಡ್ಕರ್ ನಾಯಕತ್ವದಲ್ಲಿ ಸುಮಾರು 8000 ಜನ ಸತ್ಯಾಗ್ರಹ ಮಾಡಿದರು ಅಂದು ಡಾ. ಕುರ್ತು ಕೋಟಿ ಅವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಅಸ್ಪೃಶ್ಯರಿಗೂ ದೇವಾಲಯ ಪ್ರವೇಶ ಮತ್ತು ರಥ ಎಳೆಯಲು ಅವಕಾಶ ನೀಡಬೇಕು ಎಂದರು. ಆದರೆ ಸಾಂಪ್ರದಾಯವಾದಿಗಳು ಸಭೆಗೆ ಕಲ್ಲು ತೂರಿದರು. ಚಳುವಳಿ ತೀವ್ರ ಸ್ವರೂಪ ಪಡೆದುಕೊಂಡ ಹಿನ್ನೆಲೆಯಲ್ಲಿ 1930ರಲ್ಲಿ ದೇವಾಲಯ ಪ್ರವೇಶ ದೊರೆಯಿತು. ನಂತರದಲ್ಲಿ ಚೌಡರ್ ಕೆರೆ ಮತ್ತು 1926 ಮಹಾಡ ಜಲ ಸತ್ಯಾಗ್ರಹ ನಡೆಸಿದರು.

ಅಂಬೇಡ್ಕರ್‌ರವರ ಪರಿಶ್ರಮಗಳಿಂದಾಗಿ ಈ ಕೆರೆಗಳಿಗೆ ದಲಿತರಿಗೆ ಪ್ರವೇಶ ದೊರೆಯಿತು. ಈ ಸಂದರ್ಭದಲ್ಲಿ ಅಂಬೇಡ್ಕರ್ ತಮ್ಮ ನೋವನ್ನು ಹೇಳಿಕೊಳ್ಳುತ್ತಾರೆ. ನಾವು ಈ ಕೆರೆಯ ನೀರನ್ನು ಕುಡಿಯದೆ ಇದ್ದರೆ ಹಾಳಾಗಿ ಹೋಗುವುದು ಆದರೆ ಈ ಕೆರೆಯ ನೀರನ್ನು ಏಕೆ ಕುಡಿಯ ಬೇಕಿದೆ ಎಂದರೆ ಉಳಿದ ಸವರ್ಣೀಯಂತೆ ನಾವು ಕೂಡ ಮನುಷ್ಯರೆ ಎಂದು ಸಾಬೀತು ಪಡಿಸಬೇಕಾಗಿದೆ. ಉನ್ನತ ಸಮಾನತೆಯ ಯುಗವನ್ನು ಆರಂಭಿಸಬೇಕು ಎಂದರು.

**ಡಾ.ಬಿ.ಆರ್.ಅಂಬೇಡ್ಕರ್‌ರವರ ಹೋರಾಟದ ಹಾದಿ:**

ಮಾನವ ಮಾನವರ ನಡುವಿನ ಶೋಷಣೆಯನ್ನು ಕೀಳರಿಮೆಯನ್ನು ಪ್ರೇರಿಪಿಸುವ ಮನುಧರ್ಮಶಾಸ್ತ್ರವನ್ನು ಡಿಸೆಂಬರ್ 27, 1927ರಲ್ಲಿ ಸುಟ್ಟು ಹಾಕಿದರು. ನಂತರ ಭಾರತೀಯ ಸಂವಿಧಾನದಲ್ಲಿ ಕಾನೂನಾತ್ಮಕ ಧಾರ್ಮಿಕ ಹಕ್ಕನ್ನು ಜಾರಿಗೊಳಿಸುವ ಮೂಲಕ ಭಾರತದ ಯಾವುದೇ ಪ್ರಜೆ ತನಗಿಷ್ಟ ಬಂದ ಧರ್ಮವನ್ನು ಹೊಂದುವ ಹಕ್ಕನ್ನು ನೀಡಿದರು. ಅಸ್ಪೃಶ್ಯತಾ ವಿರೋಧಿ ಅಸ್ಪೃಶ್ಯರ ಮತಾಂತರ ಆಂದೋಲನ ಉದ್ಘಾಟನಾ ಸಂದರ್ಭದಲ್ಲಿ ಹೇಳಿದ ನಾನು ಹಿಂದೂವಾಗಿ ಹುಟ್ಟಿದ್ದೇನೆ ಆದರೆ ಹಿಂದೂವಾಗಿ ಸಾಯಲಾರೆ ಎಂಬ ಮಾತಿನಂತೆ 1956 ಅಕ್ಟೋಬರ್ 14ರಂದು ಬೌದ್ಧ ಧರ್ಮವನ್ನು ಸ್ವೀಕರಿಸಿದರು.

ದಲಿತರ ಅಭಿವೃದ್ಧಿಗೆ ಸಂಬಂಧಿಸಿದಂತೆ ದೇವಾಲಯ ಪ್ರವೇಶದಿಂದ ಅಭಿವೃದ್ಧಿ ಅಸಾಧ್ಯ ಬದಲಾಗಿ ರಾಜಕೀಯ ಅಧಿಕಾರದಿಂದ ಅಭಿವೃದ್ಧಿ ಅತಿ ಮುಖ್ಯ ಎಂದು ಡಾ.ಬಿ.ಆರ್.ಅಂಬೇಡ್ಕರ್ ರಾಜಕೀಯ ಕ್ಷೇತ್ರದಲ್ಲಿ ದಲಿತರಿಗೆ ಪ್ರಾತಿನಿಧ್ಯತೆ ನೀಡಲು ಮುದ್ದಾಗಿದ್ದು ಈ ನಿಟ್ಟಿನಲ್ಲಿ 1927ರಲ್ಲಿ ಸೈಮನ್ ಕಮೀಷನ್ ಭಾರತಕ್ಕೆ ಭೇಟಿ ನೀಡಿದಾಗ ಅಂಬೇಡ್ಕರ್ ಸ್ವಾಗತಿಸಿ ದಲಿತರ ಸಮಸ್ಯೆಗಳನ್ನು ಅವರಿಗೆ ಸಾಧಿಸಲು ತೀರ್ಮಾನಿಸಿದರು. ಪ್ರಮುಖವಾಗಿ ರಾಜಕೀಯವಾಗಿ ಮೀಸಲು ಕ್ಷೇತ್ರದ ಪ್ರಸ್ತಾಪ ಇಟ್ಟರು.

**ರಾಜಕೀಯ ಅವಕಾಶ ಕಲ್ಪಿಸುವ ಹೋರಾಟ**

ದಲಿತರಿಗೆ ರಾಜಕೀಯ ಅಧಿಕಾರವಿರದೆ ಉದ್ಧಾರ ಆಗಲಾರರು ಎಂದು ಸಾರಿದರು. ಅಷ್ಟರಲ್ಲಿ 1931ರಲ್ಲಿ ಬ್ರಿಟಿಷ್ ಪ್ರಧಾನಿ ರಾಮ್ಸೆ ಮ್ಯಾಕ್ ಡೋನಾಲ್ಡ್ ಅಧಿಕಾರಕ್ಕೆ ಬಂದರು. ಆಗಸ್ಟ್ 17, 1932ರಲ್ಲಿ ಘೋಷಿಸುವ ಮೂಲಕ ದಲಿತರ ಬೇಡಿಕೆಯನ್ನು ಈಡೇರಿಸುವಲ್ಲಿ ಮುಂದಾದರು. ಆದರೆ ಗಾಂಧೀಜಿಯವರು ದಲಿತರ ಹಿಂದೂಗಳಿಂದ ಯಾವುದೇ ಪ್ರತ್ಯೇಕ ಚುನಾವಣೆ ಬೇಡವೆಂದು ಯರವಾಡ ಜೈಲಿನಲ್ಲಿ ಉಪವಾಸ ಕುಳಿತರು. ಕೊನೆಗೆ ಬಾಬು ರಾಜೇಂದ್ರ ಪ್ರಸಾದ್ ಜಯಪ್ರಕಾಶ್ ಮುಂತಾದವರು ಅಂಬೇಡ್ಕರ್‌ರ ಮನವೊಲಿಸಲು ಸಫಲರಾದರು. ಈ ಪುನಃ ಒಪ್ಪಂದ ದಲಿತರ ಪಾಲಿಗೆ ಕಪ್ಪ ಒಪ್ಪಂದವಾಯಿತು. ನಂತರ ಅಂಬೇಡ್ಕರ್‌ರು ರಾಜಕೀಯದಲ್ಲಿ ದಲಿತರು

ಸದೃಢರಾಗಬೇಕಾದರೆ ರಾಜಕೀಯ ಮೀಸಲಾತಿ ದೊರೆಯಬೇಕು ಎಂದು ಸಂವಿಧಾನದಲ್ಲಿ ರಾಜಕೀಯ ಮೀಸಲಾತಿ ನೀಡಿದರು. ಇದರ ಫಲವಾಗಿಯೇ ಲೋಕಸಭೆ ವಿಧಾನ ಸಭೆಗಳಲ್ಲಿ ಮೀಸಲಾತಿ ಕ್ಷೇತ್ರಗಳನ್ನು ಕಾಣಬಹುದಾಗಿದೆ. ಇದರಿಂದಾಗಿ ದಲಿತರ ಮಹಿಳೆಯು ಕೂಡ ಮುಖ್ಯ ಮಂತ್ರಿಯಾಗಲು ಸಾಧ್ಯವಾಯಿತು ಎಂದು ಪ್ರಸುತ್ತದಲ್ಲಿ ದಲಿತ ರಾಷ್ಟ್ರಪತಿ ರಾಮನಾಥ ಕೋವಿಂದ್‌ರವರು ದೇಶದ ಪ್ರಥಮ ಪ್ರಜೆಯಾಗಿದುದ್ದನ್ನು ಕಾಣಬಹುದಾಗಿದೆ. ಇದರಿಂದಾಗಿ ದಲಿತ ಮಹಿಳೆಯೂ ಕೂಡ ರಾಷ್ಟ್ರಪತಿ ಹಾಗೂ ಮುಖ್ಯಮಂತ್ರಿ ಆಗಲು ಸಾಧ್ಯವಾಯಿತು. ಪ್ರಸ್ತುತ ರಾಷ್ಟ್ರಪತಿಯಾಗಿ ದ್ರೌಪದಿ ಮುರ್ಮು ಅವರನ್ನು ಕಾಣಬಹುದಾಗಿದೆ. ರಾಜಕೀಯ ಮೀಸಲಾತಿಯಿಂದಾಗಿ ಭಾರತದ ಲೋಕಸಭೆಯಲ್ಲಿ 84 ಪರಿಶಿಷ್ಟ ಜಾತಿಯ ಸದಸ್ಯರನ್ನು ಕಾಣಬಹುದಾಗಿದೆ, ಕರ್ನಾಟಕದಲ್ಲಿ 36 ಪರಿಶಿಷ್ಟ ಜಾತಿಯ ವಿಧಾನಸಭೆಯ ಸದಸ್ಯರನ್ನು ಕಾಣಬಹುದಾಗಿದೆ.

**ಉಪಸಂಹಾರ**

ಅಂಬೇಡ್ಕರ್ ಹೇಳುವಂತೆ ರಾಜಕೀಯ ಅಧಿಕಾರವೇ ನೈಜ ಅಧಿಕಾರವಾಗಿದೆ. ಆದ್ದರಿಂದ ದಲಿತರ ಅಭಿವೃದ್ಧಿಗೆ ರಾಜಕೀಯ ಅಧಿಕಾರವು ಒಂದು ಪ್ರಮುಖ ಪ್ರಬಲ ಕ್ಷೇತ್ರವಾಗಿದೆ. ಸಮಾಜದಲ್ಲಿ ದಲಿತರಿಗೆ ಮತ್ತು ಮೇಲ್ವರ್ಗದವರ ಯೋಜನೆಗಳು ಹತ್ಯೆಗಳು ಮತ್ತು ದಲಿತ ಹೆಣ್ಣು ಮಕ್ಕಳ ಆತ್ಯಚಾರಗಳು, ಉತ್ತರಭಾರತ ಪ್ರಾಂತ್ಯದಲ್ಲಿ ಜಾಸ್ತಿಯಾಗುತ್ತಿರುವುದು ದುರಂತವೇ ಸರಿ. ಆದ್ದರಿಂದ ದಲಿತರು ಸದೃಢರಾಗಬೇಕಾದರೆ ಅವರಿಗೆ ಸಂರಕ್ಷಣಾತ್ಮಕ ಕ್ರಮಗಳು ದೊರೆಯಬೇಕು.

ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ದಲಿತ ವರ್ಗದ ಮಕ್ಕಳಿಗೆ ಬಜೆಟ್‌ನಲ್ಲಿ ಹಣವನ್ನು ಮೀಸಲೀಡಬೇಕು. ವಿದೇಶಿ ಶಿಕ್ಷಣ ಮುಂತಾದ ಕಾರ್ಯಕ್ರಮಗಳನ್ನು ಪ್ರಬಲಾಗಿ ಜಾರಿಗೊಳಿಸಬೇಕು. ಈ ರೀತಿಯಲ್ಲಿ ಅಂಬೇಡ್ಕರ್‌ರವರು ಜಾರಿಗೆ ತಂದ ಸಂವಿಧಾನ ಕಾನೂನುಗಳು ದಲಿತರ ಪಾಲಿಗೆ ಸಂಜೀವಿನಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ಯಾವುದೇ ಒಂದು ದೇಶ ಬೆಳವಣಿಗೆಯಲ್ಲಿ ಸಮಾಜದ ಕಟ್ಟಕಡೆಯ ಮಾನವನ ಜೀವನದ ಗುಣಮಟ್ಟವನ್ನು ಅವಲೋಕಿಸಿದಾಗ ದೇಶದ ಅಭಿವೃದ್ಧಿಯನ್ನಾಗಿ ನಾವು ಕಾಣಬಹುದಾಗಿದೆ. ಆದ್ದರಿಂದ ದಲಿತರ ಅಭಿವೃದ್ಧಿಯು ದೇಶದಲ್ಲಿ ಅಭಿವೃದ್ಧಿಗೆ ಪೂರಕವಾಗಿದೆ.

**ಪರಾಮರ್ಶನ/ಆಧಾರ ಗ್ರಂಥಗಳು**


1. ಚಂದ್ರಶೇಖರ, ಟಿ.ಆರ್. (2013). ಕಷ್ಟಕುಲದ ಕಥೆ: ದಲಿತರ ಸಬಲೀಕರಣದ ಅಧ್ಯಯನಗಳು: ಲಡಾಯಿ ಪ್ರಕಾಶನ.
2. ದೇವರಾಜ, ಓ. (2013). ಮಧ್ಯಕಾಲೀನ ಕರ್ನಾಟಕ ಚರಿತ್ರೆಯಲ್ಲಿ ದಲಿತರು. ಪಲ್ಲವ ಪ್ರಕಾಶನ.
3. ಮುನಿವೆಂಕಟಪ್ಪ. (2017). *ದಲಿತ ಚಳುವಳಿ ಚರಿತ್ರೆ.* ಟಿ.ಟಿ ಎಂಟರ್‌ಪ್ರೈಸಸ್.
4. ಷಣ್ಮುಗಂ, ವಿ. (2014) *ಆಧುನಿಕ ಭಾರತದ ನಿರ್ಮಾಪಕ ಡಾ. ಬಿ. ಆರ್. ಅಂಬೇಡ್ಕರ್.* ಸರ್ವಜನ ಸಮಾಜ ಪ್ರಕಾಶನ.
5. ಸುಜ್ಞಾನಮೂರ್ತಿ, ಬಿ. (2014). ದಲಿತರು ಮತ್ತು ಪ್ರಭುತ್ವ. ಸುಮೇಧ ಪ್ರಕಾಶನ.